# ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯ, ಸಕಲೇಶಪುರ

# C .C.No. 597/2023

| | | |
|---|---|---|
| **ಹೆಸರುಃ** | **ಸುನಿತಾ** | **DW-1** |
| **ತಂದೆ/ಗಂಡ ಹೆಸರುಃ** | **ಸುರೇಶ** | |
| **ವಯಸ್ಸುಃ** | **34 ವರ್ಷ** | |
| **ವೃತ್ತಿಃ** | **ಕೂಲಿಕೆಲಸ** | |
| **ವಿಳಾಸಃ** | **ಜಾನಕೆರೆ ಗ್ರಾಮ** | **ದಿನಾಂಕಃ02.07.2026** |

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.**

**ಮುಖ್ಯ ವಿಚಾರಣೆಃ ಆರೋಪಿ ಪರ ಕು||ಪಿ.ಕೆ.ವಕೀಲರಿಂದ**

ನನಗೆ ದೂರುದಾರರ ಪರಿಚಯ ಇರುವುದಿಲ್ಲ. ಅವರಿಗೆ ನನ್ನ ಚೆಕ್ಕು ಹೇಗೆ ಸಿಕ್ಕಿರುತ್ತದೆ ಎಂದು ಗೊತ್ತಿಲ್ಲ. ನನ್ನ ಚೆಕ್ ಕಳುವಾಗಿರುವ ಬಗ್ಗೆ ನನ್ನ ಬ್ಯಾಂಕಿನಲ್ಲಿ ನಾನು ದಿಃ13/01/2023ರಲ್ಲಿ ದೂರು ದಾಖಲು ಮಾಡಿರುತ್ತೇನೆ. ನಾನು ಸಕಲೇಶಪುರ ಗ್ರಾಮದಿಂದ ಜಾನಕೆರೆ ಗ್ರಾಮಕ್ಕೆ ಹೋಗುತ್ತಿದ್ದಾಗ ನನ್ನ 4 ಚೆಕ್ಕುಗಳು ಕಳವಾಗಿರುತ್ತವೆ. ಆದ್ದರಿಂದ ಸದರಿ ಚೆಕ್ಕನ್ನು ಸ್ಟಾಪ್ ಮಾಡುವಂತೆ ನಾನು ಬ್ಯಾಂಕಿಗೆ ನೋಟೀಸು ಕಳುಹಿಸಿರುತ್ತೇನೆ. ಅದರ ದಾಖಲಾತಿಗಳನ್ನು ನಾನು ಹಾಜರು ಪಡಿಸಿರುತ್ತೇನೆ. ನನ್ನ ಗಂಡ ಮತ್ತು ಸಂತೋಷ್ ರವರು ಪರಿಚಯಸ್ಥರಾಗಿರುತ್ತಾರೆ. ಅವರಿಬ್ಬರ ನಡುವೆ ಕಾರು ವಿಚಾರವಾಗಿ ಚೋಳಾ ಫೈನಾನ್ಸ್ ನಲ್ಲಿ ಅವರು ವ್ಯವಹಾರ ಮಾಡಿದ್ದರು. ಆಗ ಅವರು ಸ್ನೇಹಿತರಾಗಿರುತ್ತಾರೆ. ದೂರುದಾರರು ಮತ್ತು ಸಂತೋಷ್ ರವರು 4-5 ವರ್ಷಗಳಿಂದ ಒಟ್ಟಿಗೆ ಇರುತ್ತಾರೆ.

ದೂರುದಾರರು ಸಂತೋಷ್ ರವರ ವಿರುದ್ದ ಒಂದು ಪ್ರಕರಣವನ್ನು ದಾಖಲು ಮಾಡಿರುತ್ತಾರೆ. ಅದರ ದಾಖಲಾತಿಗಳನ್ನು ನಾನು ಹಾಜರು ಪಡಿಸಿರುತ್ತೇನೆ. ನನ್ನ ಮತ್ತು ದೂರುದಾರರ ನಡುವೆ ಯಾವುದೇ ಹಣಕಾಸಿನ ವ್ಯವಹಾರ ಇರುವುದಿಲ್ಲ. ನಾನು ದೂರುದಾರರಿಗೆ ಯಾವುದೇ ಚೆಕ್ಕುಗಳನ್ನು ನೀಡಿರುವುದಿಲ್ಲ. ಈ ಪ್ರಕರಣದ ಕುರಿತು ನನಗೆ ಯಾವುದೇ ನೋಟೀಸು ಬಂದಿರುವುದಿಲ್ಲ. ಆದ್ದರಿಂದ ನಾನು ದೂರುದಾರರಿಗೆ ಯಾವುದೇ ಹಣ ನೀಡುವ ಬಾದ್ಯತೆ ಹೊಂದಿರುವುದಿಲ್ಲ. ನಾನು ಈ ಕೆಳಕಂಡ ದಾಖಲಾತಿಗಳನ್ನು ಹಾಜರು ಪಡಿಸುತ್ತಿದ್ದೇನೆ.

1. ದಿಃ13/01/2023ರಂದು ಎಸ್.ಬಿ.ಐ.ಬ್ಯಾಂಕಿಗೆ ನೀಡಿದ ನೋಟೀಸನ್ನು ನಿಡಿ-1 ಎಂದು ಗುರುತಿಸಲಾಯಿತು.

2. ಸಿ.ಸಿ.ನಂ.838/2024ರ ದೂರು ಮತ್ತು ಅಂತಿಮ ವರದಿ ಮತ್ತು ದಾಖಲಾತಿಗಳ ದೃಡೀಕೃತ ನಕಲುಗಳನ್ನು ನಿಡಿ-2 ಎಂದು ಗುರುತಿಸಲಾಯಿತು. .

ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ನೀಡಲಾಯಿತು.

**ಉಕ್ತ ಲೇಖನದಂತೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

**ಓ ಹೆ ಕೇ ಸ ಇ**

ಪ್ರಧಾನ **ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ ಸಕಲೇಶಪುರ**